# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

## ಸೌಹಾರ್ದ ಸಹಕಾರಿಗಳ ಶ್ರೇಣಿಕರಣ (Grading) ಮಾಡಲು ರಚಿಸಿದ ಕರಡು ಮಾನದಂಡಗಳು

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಸೌಹಾರ್ದ ಸಸಹಕಾರಿ ಚಳುವಳಿಗೆ ವೈಶಿಷ್ಟ್ಯತೆ ಮತ್ತು ಹಿರಿಮೆಗೆ ಪೂರಕವಾಗುವಂತೆ ಸೌಹಾರ್ದ ಸಹಕಾರಿಗಳ ಶ್ರೇಣಿಕರಣ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವುದು ಅವಶ್ಯಕವಾಗಿದೆ. ಈ ಶ್ರೇಣಿಕರಣವು ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಒಂದು ಮಾದರಿಯಾಗಿ ಇರಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಈ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯು ಕರಡು ಮಾನದಂಡಗಳನ್ನು ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಸಿದ್ಧಪಡಿಸಲಾಗಿದೆ. ಈ ಮಾನದಂಡಗಳನ್ನು 2020–21ನೇ ಸಾಲಿನಿಂದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಉದ್ದೇಶ ಹೊಂದಲಾಗಿದೆ. ಪ್ರಸಕ್ತ ಸಾಲಿನಿಂದಲೇ ಎಲ್ಲ ಸೌಹಾರ್ದ ಸಹಕಾರಿಗಳು ಈ ಶ್ರೇಣಿಕರಣ ವ್ಯವಸ್ಥೆಗೆ ಒಳಪಡಲು ಸಾಧ್ಯವಾಗುವಂತೆ ಕಾರ್ಯಪ್ರವೃತ್ತರಾಗುವ ನಿಟ್ಟಿನಲ್ಲಿ ಪ್ರಕಟಿಸಲಾಗಿದ್ದು, ಇವುಗಳ ಬಗ್ಗೆ ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ತಿಳಿಸಬಹುದಾಗಿದೆ.

**ಶ್ರೇಣಿಕರಣದ ಮಾನದಂಡ ಸಿದ್ಧತೆಗೆ ಪೂರಕ ವಿಷಯಗಳು**

1. ಸೌಹಾರ್ದ ಸಹಕಾರಿಗಳ ಶ್ರೇಣಿಕರಣ ಕಾರ್ಯ ಪ್ರತಿವರ್ಷದ ಜನವರಿ ಮಾಹೆಯಲ್ಲಿ ನಡೆಸಬೇಕು
2. ಶ್ರೇಣಿಕರಣವು ಸಂಪೂರ್ಣ ಪಾರದರ್ಶಕವಾಗಿ ಹಾಗು ವೃತ್ತಿಪರವಾಗಿರಬೇಕು.
3. ಶ್ರೇಣಿಕರಣದಿಂದ ಸೌಹಾರ್ದ ಸಹಕಾರಿಗಳು ತಮ್ಮ ಸೌಹಾರ್ದ ಸಹಕಾರಿಯ ಸ್ಥಿತಿಗತಿಗಳನ್ನ ತಾವೇ ತಿಳಿದುಕೊಳ್ಳುವ ವ್ಯವಸ್ಥೆ ಇದಾಗಬೇಕು.
4. ಶ್ರೇಣೀಕರಣ ಮಾನದಂಡಗಳಿಗೆ ಒಟ್ಟು 100 ಅಂಕಗಳನ್ನು ನಿಗದಿಪಡಿಸಬೇಕು. ಅವುಗಳಲ್ಲಿ ಹಣಕಾಸಿನ ಮಾನದಂಡಗಳಿಗಾಗಿ 50 ಅಂಕಗಳು, ಉಳಿದ ಮಾನದಂಡಗಳಿಗೆ 50 ಅಂಕಗಳು.
5. ಪ್ರತಿ ಮಾನದಂಡವು ಸಹ ತನ್ನದೇ ಅದ ಮೌಲ್ಯವನ್ನು ಹೊಂದಿರಬೇಕು
6. ಈ ಮೌಲ್ಯಮಾಪನಕ್ಕೆ ಆಯ್ಕೆ ಅಥವಾ ಅರ್ಹತೆಗಾಗಿ ಒಂದು ಸಹಕಾರಿಯು ಪ್ರಾರಂಭವಾಗಿ ಮೂರು ವರ್ಷಗಳು ಕಳೆದಿರಬೇಕು
7. ಸಹಕಾರಿಯ ಪ್ರಸಕ್ತ ಸ್ವಾವಲಂಬನೆ ಅಂಶಗಳನ್ನು ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಗಮನಿಸಬೇಕು. (Current viability and sustainable viability to be considered.)
8. ಹಣಕಾಸಿನ ನಿರ್ವಹಣೆ ಹಾಗು ಶಾಸನಬದ್ಧ ಕಾರ್ಯನಿರ್ವಹಣೆ ಅಂಶಗಳಲ್ಲಿ ಲೋಪಗಳು ಇದ್ದಲ್ಲಿ ಅಂಕಗಳಲ್ಲಿ ಕಡಿತಮಾಡಬಹುದು (–ve points)

**ಈ ಮೇಲಿನ ಅಂಶಗಳ ಆಧಾರದ ಮೇಲೆ ಸೌಹಾರ್ದ ಸಹಕಾರಿಗಳಿಗೆ ಈ ಕೆಳಕಂಡಂತೆ ಶ್ರೇಣಿಕರಣ ಮಾಡಬಹುದಾಗಿದೆ.**

| ಕ್ರ. ಸಂ. | ಶ್ರೇಣಿ |
|---|---|
| 1. | 80+ = ಎ +............................ ಅತ್ಯುತ್ತಮ ಶ್ರೇಣಿ |
| 2. | 70 ರಿಂದ 79 = ಎ................. ಉತ್ತಮ ಶ್ರೇಣಿ |
| 3. | 60 ರಿಂದ 69 = ಬಿ............ಪ್ರಗತಿಪರ ಶ್ರೇಣಿ |
| 4. | 50 ರಿಂದ 59 = ಸಿ........ಮಧ್ಯಮ ಶ್ರೇಣಿ |
| 5. | 50 ಕ್ಕಿಂತ ಕೆಳಗೆ = ಡಿ...........ಸಾಮಾನ್ಯ ಶ್ರೇಣಿ/ಸಾಧಾರಣ |

Karnataka State Souharda Federal Cooperative Ltd. Reg. No. RSR / SOU / ACT / 136 / Regn 051 / 2001-02 dated 04-01-2002 Bangalore

| ಕ್ರ. ಸಂ | ಉಪ. ಸಂಖ್ಯೆ | ಮಾನದಂಡಗಳು |
|---|---|---|
| 1 | | ಆರ್ಥಿಕ ಮಾನದಂಡಗಳು |
| | 1 | ಪಾಲುಬಂಡವಾಳ ವೃದ್ಧಿಯ ವೇಗದ ಸರಾಸರಿ |
| | 2 | ನಿಧಿಗಳ ವೃದ್ಧಿಯ ವೇಗದ ಸರಾಸರಿ |
| | 3 | ಹೂಡಿಕೆಗಳ ಗುಣಮಟ್ಟ ಪರಿಶೀಲನೆ |
| | 4 | ಕಾನೂನು ನಿಯಮ ಹಾಗೂ ಉಪನಿಯಮಗಳಿಗೆ ಸಂಬಂಧಿಸಿದಂತೆ ನಿಧಿಗಳ ಹೂಡಿಕೆ |
| | 5 | **ಠೇವಣಿ :** |
| | | ಅ. ಕಡಿಮೆ ವೆಚ್ಚದ ಬಂಡವಾಳ ವೃದ್ಧಿಯ ವೇಗದ ಸರಾಸರಿ |
| | | ಆ. ನಿಗಧಿತ ಅವಧಿಗಳ ಠೇವಣಾತಿಗಳ ವೃದ್ಧಿಯ ವೇಗದ ಸರಾಸರಿ ಬಂಡವಾಳದ ಬೆಲೆ (Cost of Fund) |
| | 6 | **ನಗದು :** ಸಹಕಾರಿಲ್ಲಿರುವ ನಗದು ಬ್ಯಾಂಕಿನಲ್ಲಿರುವ ನಗದು(CRR, SLR) ಇವುಗಳ ನಿರ್ವಹಣೆ ಮತ್ತು ಲಿಕ್ವಿಡಿಟಿ ಪರ್ಫಾರಮೆನ್ಸ್ ( Liquidity Performance) |
| | 7 | ಬಡ್ಡಿಯೇತರ ಆದಾಯಗಳ ವೃದ್ಧಿಯ ವೇಗದ ಸರಾಸರಿ on Fund Based income – ಇದಕ್ಕಾಗಿ ನಿರ್ವಹಿಸುತ್ತಿರುವ ವಿವಿಧ ಕಾರ್ಯಚಟುವಟಿಕೆಗಳು |
| | 8 | **ಸಾಲಗಳ ನಿರ್ವಹಣೆ** |
| | | ಅ. ಅಡಮಾನ ಸಾಲಗಳು (ಶೇಕಡವಾರು 40% ಇರಬೇಕು)(A Mortgage loans) |
| | | ಆ. ಗಿರವಿ ಸಾಲಗಳು (ಶೇಕಡವಾರು 15 ರಷ್ಟು)( Pledge ) |
| | | ಇ. ಭೋಗ್ಯಕ್ಕೆ ಸಾಲಗಳು (ಶೇಕಡವಾರು 15 ರಷ್ಟು) ( hypothecation) |
| | | ಈ. ವೈಯಕ್ತಿಕ ಸಾಲಗಳು. (ಶೇಕಡವಾರು 15 ರಷ್ಟು) Personal loans |
| | | ಉ. ಜಾಮೀನ ಸಾಲಗಳು (ಶೇಕಡವಾರು 15 ರಷ್ಟು) surety loans |
| | | ಊ. ವಿಶೇಷ ಸಾಲಗಳು (ಶೇಕಡವಾರು 10 ರಷ್ಟು) special loans |
| | 9 | ಅನುತ್ಪಾದಕ ಆಸ್ತಿಗಳನು ಪ್ರಮಾಣ |
| | 10 | ಅ. ಕಟ್ಟಡಗಳನ್ನು ಹೊಂದಿರುವುದು |
| | | ಆ. ನಿವೇಶನ ಹೊಂದಿರುವುದು |
| | 11 | ಆಸ್ತಿ ಹಾಗೂ ಜವಾಬ್ದಾರಿಗಳು (ಸರಾಸರಿ ವ್ಯವಹಾರದ 3%–4% ಮೀರಬಾರದು) |
| | 12 | ಬಂಡವಾಳದ ಬೆಲೆ (Cost of Fund) |
| | 13 | ಆಸ್ತಿಗಳ ಮೇಲೆ ಗಳಿಕೆ (yield on Assets) 1.25 to 1.5 |
| | 14 | ಆಡಳಿತ ವೆಚ್ಚ (1.5 %ಮೀರಿರಬಾರದು) |
| | 15 | ಆಪತ್ತು ನಿರ್ವಹಣಾ ವೆಚ್ಚ(Risk Cost)(.5% to 1% ಮೀರಬಾರದು) |
| | 16 | ನಿರ್ವಹಣ ನಿಗದಿತ ಹಂತ (break-even point) |
| | | ಅ. ವ್ಯವಹಾರ : ಠೇವಣಿ + ಸಾಲಗಳು |
| | | ಆ. ಠೇವಣಿಗಳು (ಕನಿಷ್ಠ ಮಾನದಂಡಗಳು) & ಇ. ಸಾಲಗಳು (ಕನಿಷ್ಠ ಮಾನದಂಡಗಳು) |
| | 17 | ಸಿಡಿ ರೇಷಿಯೋ (70% –75% ಮೀರಬಾರದು) |
| | 18 | ಲಾಭದಾಯಕತೆ–ಹಣಕಾಸಿನ ನಿರ್ವಹಣೆಯಲ್ಲಿ ಲಾಭದಾಯಕತೆಯ ಪ್ರಮಾಣ |
| | 19 | ಪ್ರತಿ ಸಿಬ್ಬಂದಿಯಿಂದ ಸರಾಸರಿ ವ್ಯವಹಾರ |
| | 20 | ಅ. ಸಿ.ಆರ್.ಎ.ಆರ್. ( C.R.A.R. ) |
| | 21 | ಆ. ವೈಯಕ್ತಿಕ ಗರಿಷ್ಠ ಸಾಲಗಳ ಮಿತಿ ನಿರ್ವಹಣೆ |
| | 22 | ಸಾಲ ವಸೂಲಾತಿ ಪ್ರಮಾಣ |

Karnataka State Souharda Federal Co-operative Ltd., Reg. No. BSR / SOU / ACT 136 / Regn. 051 / 2001-02 dated 04-01-2002, Bangalore

| | | |
|---|---|---|
| 2 | **ಶಾಸನ ಬದ್ಧ ಕಾರ್ಯ ನಿರ್ವಹಣೆ** | |
| | 1. | ಆದಾಯ ತೆರಿಗೆ ರಿಟರ್ನ್‌ಗಳನ್ನು ಸಕಾಲಕ್ಕೆ ಸಲ್ಲಿಸಿರುವುದು |
| | 2. | ಲೆಕ್ಕಪರಿಶೋಧನೆ ಆಗಿರುವುದು |
| | 3. | ಚುನಾವಣೆ ಸಕಾಲದಲ್ಲಿ ನಡೆದಿರುವುದು |
| | 4. | ನಿಬಂಧಕರಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸಲಾಗಿದೆ. |
| | 5. | ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸಲಾಗಿದೆ. |
| | 6. | ಕಾನೂನು ನಿಯಮ ಉಪ ನಿಯಮಗಳ ಪಾಲನೆ |
| | 7. | ವಾರ್ಷಿಕ ಮಹಾ ಸಭೆ, ಆಡಳಿತ ಮಂಡಳಿ ಸಭೆ ನಡಾವಳಿಗಳ ನಿರ್ವಹಣೆ ಸದಸ್ಯರ ಬಗ್ಗೆ ವಿವರಗಳು |
| | 8. | ಸಂಯುಕ್ತ ಸಹಕಾರಿಯ ನಿರ್ದೇಶನಗಳ ಪಾಲನೆ ಆಗಿದೆ. |
| 3 | **ಸಹಕಾರ ತತ್ವಗಳ ಪಾಲನೆ** | |
| | 1 | ಸದಸ್ಯತ್ವ |
| | 2 | ಸದಸ್ಯರ ಭಾಗವಹಿಸುವಿಕೆ |
| | 3 | ನಿರ್ದೇಶಕರ ಭಾಗವಹಿಸುವಿಕೆ ಹಾಗೂ ಆಯ್ಕೆಗಳು (ಆವರ್ತ ವಿಧಾನ ಅನುಸರಿಸಲಾಗುತ್ತಿದೆಯೇ) |
| | 4 | ಸಾಮಾಜಿಕ ಬದ್ಧತೆ ಕಾರ್ಯಚಟುವಟಿಕೆಗಳ ವಿವರಗಳು |
| 4 | **ದೃಷ್ಟಿ ಕೋನ ಹಾಗೂ ಕಾರ್ಯಸೂಚಿ** – 5 ರಿಂದ 10 ವರ್ಷದ ಕ್ರಿಯಾಯೋಜನೆ | |
| 5 | **ಸಹಕಾರಿ ಆಡಳಿತ** | |
| | 1. | ಆಡಳಿತ ಪಾರದರ್ಶಕತೆ |
| | 2. | ಉತ್ತರದಾಯಿತ್ವ |
| | 3. | ವಾರ್ಷಿಕ ಮಾಹಾಸಭೆ ಆಡಳಿತ ಮಂಡಳಿ ಸಭೆ, ಉಪಸಮೀತಿಗಳ ಸಭೆಗಳ ನಿರ್ವಹಣೆ ಸದಸ್ಯರ ಬಗ್ಗೆ ಹಾಗೂ ಸಾಲಗಾರರ ಬಗ್ಗೆ ಕೆ.ವೈ.ಸಿ ವಿವರಗಳ ನಿರ್ವಹಣೆ. |
| | 4. | ಮಾನವ ಸಂಪನ್ಮೂಲ ನಿರ್ವಹಣೆ, ಸಿಬ್ಬಂದಿ ನಿಯಮಗಳು, ಸಿಬ್ಬಂದಿಗಳ ಶೈಕ್ಷಣಿಕ ಅರ್ಹತೆಗಳು ಸಿಬ್ಬಂದಿ ನೇಮಕಾತಿ ವಿಧಾನಗಳು ಬಡ್ತಿ ವಿಧಾನಗಳು, |
| 6 | **ಮೂಲ ಸೌಕರ್ಯಗಳು (infrastructure)** | |
| | 1 | ಕಟ್ಟಡಗಳು |
| | 2 | ಯಂತ್ರೋಪಕರಣಗಳು |
| | 3 | ತಾಂತ್ರಿಕ ಸೌಲಭ್ಯಗಳು (ಭದ್ರತಾ ಕ್ಯಾಮೆರಾಗಳು ಸೇರಿದಂತೆ.) |
| | 4 | ಆಪತ್ತುಗಳ ನಿರ್ವಹಣೆ ವ್ಯವಸ್ಥೆ (ಬೆಂಕಿ ಅನಾಹುತ, ನೆರೆ ಇತ್ಯಾದಿ ಆಕಸ್ಮಿಕ) |
| | 5 | ದಾಖಲೆಗಳ ನಿರ್ವಹಣೆ ವ್ಯವಸ್ಥೆ |
| 7 | **ಸಾರ್ವಜನಿಕ ಅಭಿಪ್ರಾಯಗಳು** | |
| | 1 | ಸಹಕಾರಿಯನ್ನು ಗುರುತಿಸುವುದು |
| | 2 | ಸಹಕಾರಿಯ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರ ಅಭಿಪ್ರಾಯ |
| | 3 | ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳು |
| | 4 | ಸಹಕಾರಿ ಸಂಸ್ಥೆಯು ಹೊಂದಿದ ವ್ಯಾಪ್ತಿಯಲ್ಲಿ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿರುವುದು |
| | 5 | ಸಾರ್ವಜನಿಕ ಸಮಾರಂಭಗಳಲ್ಲಿ ಸಹಕಾರಿ ಸಂಸ್ಥೆಯ ಭಾಗವಹಿಸುವಿಕೆ (ಹಬ್ಬ ಹರಿದಿನಗಳು ಮತ್ತು ರಾಷ್ಟ್ರೀಯ ಸಮಾರಂಭದ ದಿನಗಳು) |
| | 6 | ಸ್ಥಳೀಯ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ |

Karnataka State Souharda Federal Co-op... Ltd., Bangalore
Reg. No. RSR/SOU/ACT/136/ Regn 051/2001-02 dated 04-01-2002

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು